ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ
ಘನ ನ್ಯಾಯಾಲಯದಲ್ಲಿ

ಪ್ರಕರಣ ಸಂಖ್ಯೆಃ ಎಸ್.ಸಿ 26/2020

ದಿನಾಂಕಃ 06.09.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 3 (ಚಾ.ಸಾ.3 )

ಹೆಸರು : ಸುಹೇಲ್ ಖಾನ್

ತಂದೆಯ ಹೆಸರು : ಅಯೂಬ್

ವಯಸ್ಸು : 21 ವರ್ಷ

ಉದ್ಯೋಗ : ವೆಲ್ಡಿಂಗ್ ಕೆಲಸ

ವಾಸ ಸ್ಥಳ : ಚನ್ನಪಟ್ಟಣ

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನಗೆ ಆರೋಪಿ - ಸೈಯದ್ ಜಬೀರ್ ಹಾಗು ಪಿರ್ಯಾದಿ, ಚಾಸಾ.2 ಗೊತ್ತು.

2. ಒಂದು ವರ್ಷ 7 ರಿಂದ 8 ತಿಂಗಳ ಹಿಂದೆ ಗಲಾಟೆಯಾಯಿತು.

(ಮುಂದುವರೆವದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ರಮಾ ಬಿ.ಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ದಿನಾಂಕಃ 25.08.2022
(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು.)

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

3. ನನಗೆ ಚಾಸಾ.1 ಮತ್ತು ಆರೋಪಿಯ ಪರಿಚಯ ಗೊತ್ತಿಲ್ಲ. ಸುಮಾರು ಒಂದೂವರೆ ವರ್ಷಗಳ ಹಿಂದೆ ನಾನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದಾಗ ಗಾಯಾಳುವಿನ ಎಡ ಹೆಬ್ಬೆರಳು ಕಟ್ಟಾಗಿದ್ದನ್ನು ನೋಡಿದೆ, ಆತನ ಮೇಲೆ ಯಾರು ಮಾಡಿದ್ದರು ಮತ್ತು ಏನು ಘಟನೆಯಾಯಿತು ಎಂದು ನಾನು ನೋಡಿಲ್ಲ.

4. ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ

5. ನಾನು, ಗಾಯಾಳು ಫರ್ಹಾನ್ ಮೆಹದಿ ಮತ್ತು ಸೈಯದ್ ಸಾದಿಕ್ ಇವರ ಮಗ ಸಿಮ್ರಾನ್ ಖಾನ್ ಸ್ನೇಹಿತರಾಗಿದ್ದೆವು, ತಾಃ 20.01.2020 ರಂದು ರಾತ್ರಿ 10.30 ಗಂಟೆಗೆ ನಾನು ಚಾಸಾ.1 ಮತ್ತು 2, ಚಾಸಾ.2 ರವರ ಕೆಎ 04 ಜೆಎಲ್ 2875 ದ್ವಿಚಕ್ರ ವಾಹನದಲ್ಲಿ ಸಿಮ್ರಾನ್ ಖಾನ್ ಇವರ ಕಾರನ್ನು ಗ್ಯಾರೇಜಿಗೆ ರಿಪೇರಿಗೆ ಕೊಟ್ಟಿದ್ದರು, ಅದನ್ನು ತರಲು ಅಲ್ಲಿಗೆ ಹೋದೆವು. ಕಾರು ರಿಪೇರಿಯಾಗದ ಕಾರಣ ಪುನಃ ನಾವು ಚನ್ನಪಟ್ಟಣಕ್ಕೆ ಬಂದು ಮನೆಗೆ ಹೋಗೋಣ ಎಂದು ಕಲಾ ನಗರದಲ್ಲಿರುವ ಅಯಾತ್ ಹಬೀಬ್ ಶಾಲೆ ಹಿಂಭಾಗದ ರಸ್ತೆಯಲ್ಲಿ ರಾತ್ರಿ 11 ಗಂಟೆಯಲ್ಲಿ ಹೋಗುವಾಗ ಆರೋಪಿ - ಸೈಯದ್ ಜಬೀರ್ ಎದುರುಗಡೆಯಿಂದ ನಡೆದುಕೊಂಡು ಬರುತ್ತಿತ್ತು, ನಮ್ಮನ್ನು ನೋಡಿ ಬೈಕನ್ನು ಅಡ್ಡಗಟ್ಟಿ ನಿಲ್ಲಿಸಿ ತನ್ನ ಕತ್ತಿನಲ್ಲಿದ್ದ ಒಂದು ಕಪ್ಪು ಬಣ್ಣದ ಕಾಲೇಜ್ ಬ್ಯಾಗನ್ನು ತೆಗೆದು ಬ್ಯಾಗಿನಿಂದ ಒಂದು ಡ್ರಾಗರ್ ತೆಗೆದು ಚಾಸಾ.2 ಇವರ ಕುತ್ತಿಗೆಗೆ ಹೊಡೆಯಲು ಹೋದಾಗ ಆತ ತನ್ನ ಎಡಗೈಯನ್ನು ಅಡ್ಡ ತಂದಾಗ ಎಡಗೈಗೈ ಹೆಬ್ಬೆರಳಿಗೆ ಏಟು ಬಿದ್ದು ಪೂರ್ತಿ ಹೆಬ್ಬೆರಳು ಕಟ್ಟಾಗಿ ನೆಲಕ್ಕೆ ಬಿತ್ತು ಮತ್ತು ಡಾಗರ್ ಮುರಿದು ಹೋಯಿತು, ಆಗ

ನಾವು ಜೋರಾಗಿ ಕೂಗಿಕೊಂಡು ಆತನನ್ನು ಹಿಡಿಯಲು ಹೋದಾಗ ಆತ ಮುರಿದಿದ್ದ ಡಾಗರ್ ಎತ್ತಿಕೊಂಡು ಚಾಸಾ.2 ಇವರನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಅಲ್ಲಿಂದ ಹೊರಟು ಹೋದ, ಆಗ ನಾನು ಚಾಸಾ.1 ಕಟ್ಟಾಗಿದ್ದ ಚಾಸಾ.2 ಈತನ ಬೆರಳನ್ನು ತೆಗೆದುಕೊಂಡು ಅದೇ ಬೈಕಿನಲ್ಲಿ ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದೆವು ಮತ್ತು ಚಾಸಾ.2 ರವರ ಅಣ್ಣ ಮುಸಾಫಿ ಇವರಿಗೆ ವಿಷಯ ತಿಳಿಸಿದೆವು ಅಂದರೆ ಸರಿಯಲ್ಲ.

6. ನಂತರ ಗಲಾಟೆ ಬಗ್ಗೆ ವಿಚಾರಿಸಿದಾಗ ತಾಃ 19.01.2020 ರಂದು ರಾತ್ರಿ 9 ಗಂಟೆಗೆ ಆರೋಪಿ - ಸೈಯದ್ ಜಬೀರ್ ನಮ್ಮ ಏರಿಯಾದಲ್ಲಿರುವ ಮೈದಾನದಲ್ಲಿ ಎಲ್ಲಿಂದಲ್ಲೋ ಗಾಂಜಾ ತಂದು ಹುಡುಗರಿಗೆ ಸೇದಿಸುತ್ತಿದ್ದ, ಅದಕ್ಕೆ ನಾನು ಈ ರೀತಿ ಮಾಡುವುದು ಸರಿಯಲ್ಲ ಎಂದು ಹೇಳಿದ್ದಕ್ಕೆ ಆತ ನನ್ನೊಂದಿಗೆ ಜಗಳ ಮಾಡಿ, ಈ ರೀತಿ ಮಾಡಿದ್ದಾನೆಂದು ಚಾಸಾ.2 ನನ್ನ ಮುಂದೆ ಹೇಳಿದ ಅಂದರೆ ಸರಿಯಲ್ಲ. ಅದೇ ಪ್ರಕಾರ ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ನಿಪಿ.11 ರಂತೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ.

7. ನನಗೆ ಎಲ್ಲಾ ವಿಚಾರಗಳೂ ಗೊತ್ತಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**